EBIX CASH

# ಎಚ್‌ಡಿಎಫ್‌ಸಿ ಬ್ಯಾಂಕ್ ಇಬಿಕ್ಸ್‌ಕ್ಯಾಶ್ ಪ್ರೀಪೇಯ್ಡ್ ಕಾರ್ಡ್ ಅಪ್ಲಿಕೇಶನ್ ಫಾರ್ಮ್

HDFC BANK
We understand your world

ಇತ್ತೀಚಿನ ಪಾಸ್‌ಪೋರ್ಟ್-ಸೈಜ್ ಫೋಟೋಗ್ರಾಫ್ ಹಚ್ಚಿ ಅದರ ಮೇಲಿಂದ ಸಾಗುವಂತೆ ಸಹಿ ಮಾಡಿರಿ

**ಅರ್ಜಿದಾರರ ಸಹಿ**

* ಪ್ರಥಮ ನಾಮ :

ಮಧ್ಯಮ ನಾಮ :

ಅಂತಿಮ ನಾಮ :

* ಜನನ ತಾರೀಖು :

* ಮೊಬೈಲ್ :

* ತಾಯಿಯ ಮೊದಲನೆಯ ಹೆಸರು:

* ಲಿಂಗ : ☐ ಪು ☐ ಸ್ತ್ರೀ ☐ ತೃತೀಯ ಲಿಂಗ

* **ವಿಳಾಸ** (ವಿಳಾಸ ಪುರಾವೆಯಲ್ಲಿ ಇರುವಂತೆ)

* ನಗರ/ಊರು :

* ಅಂಚೆ ಕೋಡ್ :

* ರಾಜ್ಯ :

ತಾರೀಖು :

*ಕ್ರಮ ಸಂ. :
(ಕಾರ್ಡ್‌ನ ಹಿಂಬದಿಯಲ್ಲಿ ನೀಡಲಾಗಿದೆ. ಉದಾ. SO xxxx xxxx)

ಈಮೇಲ್ ಐಡಿ :

* ದಸ್ತಾವೇಜುಗಳು : ದಯವಿಟ್ಟು ಈ ಕೆಳಗಿನ ದಸ್ತಾವೇಜುಗಳನ್ನು ಒದಗಿಸಿರಿ

☐ ಆಧಾರ್ ನಂ.

☐ ಪ್ಯಾನ್ ನಂ ಅಥವಾ ಒವಿಡಿ

ಸೂಚನೆ : ಗ್ರಾಹಕರು ತಮ್ಮ ಎಟಿಎಮ್/ಪಿಒಎಸ್/ಇಂಟರ್‌ನೆಟ್ ಪಿನ್ ಮತ್ತು ಸಿವಿವಿಯನ್ನು ಬೇರೆ ಯಾವುದೇ ವ್ಯಕ್ತಿಗೆ ಬಹಿರಂಗಪಡಿಸಬಾರದು/ಹಂಚಿಕೊಳ್ಳಬಾರದು ಎಂದು ಸಲಹೆ ನೀಡಲಾಗುತ್ತದೆ. ಇಬಿಕ್ಸ್ ಕ್ಯಾಶ್ ಮತ್ತು/ಅಥವಾ ಎಚ್‌ಡಿಎಫ್‌ಸಿ ಬ್ಯಾಂಕ್ ಇಬಿಕ್ಸ್ ಕ್ಯಾಶ್ ಪ್ರೀಪೇಯ್ಡ್ ಕಾರ್ಡ್‌ನ ಯಾವುದೇ ಕಾರಣದಿಂದ ಯಾವುದೇ ರೀತಿಯಲ್ಲಿ ಮೋಸದ ಅಥವಾ ತಪ್ಪು ಬಳಕೆ ಮಾಡಲಾದರೆ ಅದಕ್ಕೆ ಎಚ್‌ಡಿಎಫ್‌ಸಿ ಬ್ಯಾಂಕ್ ಲಿ. ಜವಾಬ್ದಾರಿಯಾಗಲಾರದು. ದಯವಿಟ್ಟು ಮುಂದಿನ ಸೂಚನೆಗಳಿಗಾಗಿ ನಿಮ್ಮ ರಸೀದಿಯನ್ನು ಪಡೆದುಕೊಂಡು ಜೋಪಾನವಾಗಿರಿಸಿರಿ.

## ಗ್ರಾಹಕರ ಸಮ್ಮತಿ

**(ಇ-ಆಥೆಂಟಿಕೇಶನ್)**

ಮೇಲ್ಕಾಣಿಸಿದ ಆಧಾರ್ ನಂಬರ್ ನನ್ನದಾಗಿದ್ದು ನಾನು ಈ ಮೂಲಕ ಒಪ್ಪಿಕೊಳ್ಳುವುದೇನೆಂದರೆ, ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಇಬಿಕ್ಸ್‌ಕ್ಯಾಶ್ ಓಪನ್ ಲೂಪ್ ಜನರಲ್ ಪರ್ಪಸ್ ರೀಲೋಡೇಬಲ್ (GPR) ಕಾರ್ಡನ್ನು ಪಡೆಯಲಿಕ್ಕಾಗಿ ಐಟಿಜಡ್ ಕ್ಯಾಶ್ ಕಾರ್ಡ್ ಪ್ರೈವೇಟ್ ಲಿಮಿಟೆಡ್ (ಇಬಿಕ್ಸ್‌ಕ್ಯಾಶ್) ಮೂಲಕ ಆಧಾರ್‌ನ್ನು ಬಳಸಿಕೊಳ್ಳಲು ನನ್ನ ದೃಢೀಕರಣ ನೀಡುತ್ತಿದ್ದೇನೆ ಮತ್ತು ಯುಐಡಿಎಐಯಿಂದ ಡೆಮೊಗ್ರಾಫಿಕ್ ವಿವರಗಳ ಸಹಿತ ನನ್ನ ವೈಯಕ್ತಿಕ ವಿವರಗಳನ್ನು ಪಡೆಯಲಿಕ್ಕಾಗಿ ನನ್ನ ಆಧಾರ್ ಮತ್ತು ಬಾಯೊಮೆಟ್ರಿಕ್ಸ್/ಒಟಿಪಿ ಪಡೆಯಲು ನಾನು ಸಮ್ಮತಿಸುತ್ತಿದ್ದೇನೆ. ಇಬಿಕ್ಸ್‌ಕ್ಯಾಶ್ ನನ್ನ ಪರಿಚಯದ ಮಾಹಿತಿಯನ್ನು ಮೇಲ್ಕಾಣಿಸಿದ ಉದ್ದೇಶಕ್ಕಾಗಿ ಬಳಸಿಕೊಳ್ಳುತ್ತಿದೆ ಎಂದು ನಾನು ಅರಿತಿದ್ದೇನೆ. ನನ್ನ ಬಾಯೊಮೆಟ್ರಿಕ್ಸ್/ಒಟಿಪಿಯನ್ನು ಗೂಢ ಲಿಪೀಕರಿಸಲಾಗುತ್ತದೆ ಮತ್ತು ಅದನ್ನು ಶೇಖರಿಸಿಡಲಾಗದು/ಹಂಚಿಕೊಳ್ಳಲಾಗದು ಮತ್ತು ಕೇವಲ ಅದೇ ಉದ್ದೇಶಕ್ಕಾಗಿ ಯುಐಡಿಎಐ (ಸಿಐಡಿಆರ್)ಗೆ ಸಲ್ಲಿಸಲಾಗುತ್ತದೆ ಎಂದು ನಾನು ಅರಿತಿದ್ದೇನೆ.

**(ಭೌತಿಕ ಆಧಾರ್)**

ಮೇಲ್ಕಾಣಿಸಿದ ಆಧಾರ್ ನಂಬರ್ ನನ್ನದಾಗಿದೆ. ನಾನು ಈ ಮೂಲಕ ಒಪ್ಪಿಕೊಳ್ಳುವುದೇನೆಂದರೆ, ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಇಬಿಕ್ಸ್‌ಕ್ಯಾಶ್ ಓಪನ್ ಲೂಪ್ ಜನರಲ್ ಪರ್ಪಸ್ ರೀಲೋಡೇಬಲ್ (GPR) ಕಾರ್ಡನ್ನು ಪಡೆಯಲಿಕ್ಕಾಗಿ ಐಟಿಜಡ್ ಕ್ಯಾಶ್ ಕಾರ್ಡ್ ಪ್ರೈವೇಟ್ ಲಿಮಿಟೆಡ್ (ಇಬಿಕ್ಸ್‌ಕ್ಯಾಶ್) ಮೂಲಕ ಆಧಾರ್‌ನ ಭೌತಿಕ ಪ್ರತಿಯನ್ನುನ್ನು ನಾನು ಬಳಸಿಕೊಳ್ಳಲು ನನ್ನ ದೃಢೀಕರಣ ನೀಡುತ್ತಿದ್ದೇನೆ. ನನ್ನ ಯುಐಡಿಎಐ ನೀಡಿರುವ ಆಧಾರ್‌ರ ಭೌತಿಕ ಪ್ರತಿಯನ್ನು ಸಂಗ್ರಹಿಸಲು ನಾನು ನನ್ನ ಸಮ್ಮತಿ ನೀಡುತ್ತಿದ್ದೇನೆ. ಆಧಾರ್ ಪ್ರತಿಯನ್ನು ಸಲ್ಲಿಸುವ ಹಾಗೂ ಅಪ್ಲಿಕೇಶನ್ ಫಾರ್ಮನ್ನು ಸಹಿ ಮಾಡುವುದರ ಉದ್ದೇಶವನ್ನು ನಾನು ಅರಿತಿದ್ದೇನೆ. ಇಬಿಕ್ಸ್‌ಕ್ಯಾಶ್ ನನ್ನ ಪರಿಚಯದ ಮಾಹಿತಿಯನ್ನು ಕೇವಮಲ ಮೇಲ್ಕಾಣಿಸಿದ ಉದ್ದೇಶಕ್ಕಾಗಿ ಬಳಸುತ್ತದೆ ಎಂದು ಇಬಿಕ್ಸ್‌ಕ್ಯಾಶ್ ನೀಡಿದ ಉದ್ಘೋಷಣೆಯನ್ನು ನಾನು ಅರಿತಿದ್ದೇನೆ.

ಗ್ರಾಹಕರ ಸಹಿ

## ಉದ್ಘೋಷಣೆ

ಎಚ್‌ಡಿಎಫ್‌ಸಿ ಬ್ಯಾಂಕ್ ಇಬಿಕ್ಸ್ ಕ್ಯಾಶ್ ಪ್ರೀಪೇಯ್ಡ್ ಕಾರ್ಡ್‌ಗೆ ಸಂಬಂಧಪಟ್ಟಂತೆ, ಅದರ ಬಳಕೆಗೆ ಸಂಬಂಧಪಟ್ಟ ನಿಬಂಧನೆ ಹಾಗೂ ಷರತ್ತುಗಳು, ಅನ್ವಯಿಸುವ ಇತರ ನಿಯಮ ಹಾಗೂ ನಿಯಂತ್ರಣಗಳನ್ನು ನಾನು ಓದಿದ್ದೇನೆ ಮತ್ತು ಈ ಮೂಲಕ ಪಾಲಿಸುವೆನೆಂದು ಒಪ್ಪಿಕೊಳ್ಳುತ್ತೇನೆ. ಈ ಸಂಬಂಧಕ್ಕೆ ಅನ್ವಯಿಸುವ ಯಾವುದೇ ಚಾರ್ಜ್‌ಗಳು/ಅಪ್‌ಡೇಟ್‌ಗಳು ಕೇವಲ ಐಟಿಜಡ್ ಕಾರ್ಡ್ ಲಿ.ನ ವೆಬ್‌ಸೈಟ್‌ನಲ್ಲಿ, ಅಂದರೆ www.ebixcash.comನಲ್ಲಿ ಲಭ್ಯವಿರುತ್ತದೆ ಮತ್ತು ಅಲ್ಲಿಂದ ಪಡೆಯಬಹುದಾಗಿದೆ ಹಾಗೂ ನನಗೆ ಅವು ಬಾಧ್ಯವಾಗಿವೆ ಎಂಬುದನ್ನು ನಾನು ಅರಿತಿದ್ದೇನೆ. ನಾನು ಈ ಮೂಲಕ ಉದ್ಘೋಷಿಸುವುದೇನೆಂದರೆ, ಈ ಅಪ್ಲಿಕೇಶನ್ ಫಾರ್ಮ್‌ನಲ್ಲಿ ನೀಡಲಾಗಿರುವ ವಿವರಗಳು ಮತ್ತು ಮಾಹಿತಿಯು (ಮತ್ತು ಇಲ್ಲಿ ಲಗತ್ತಿಸಿರುವ ಹಾಗೂ ಉಲ್ಲೇಖಿತ ಎಲ್ಲಾ ದಸ್ತಾವೇಜುಗಳು) ಸತ್ಯ, ಸರಿ, ಸಂಪೂರ್ಣ ಹಾಗೂ ಎಲ್ಲಾ ವಿಷಯದಲ್ಲೂ ತಾಜಾ ಆಗಿವೆ ಮತ್ತು ಯಾವುದೇ ಮಾಹಿತಿಯನ್ನು ನಾನು ತಡೆಹಿಡಿದಿಲ್ಲ. ನಾನು ನೀಡುವ ಮಾಹಿತಿಯು ಮ್ಯಾಂಕಿಂಗ್ ಕಂಪೆನಿಗಳ ಕಾರ್ಯಾಚರಣೆಯ ಮಾರ್ಗದರ್ಶನಗಳ ಅಂತರ್ಗತ ಅಗತ್ಯವಾಗಿವೆ ಎಂದು ನಾನು ಅರಿತಿದ್ದೇನೆ. ಐಟಿಜಡ್ ಕ್ಯಾಶ್ ಕಾರ್ಡ್ ಲಿ. ಮತ್ತು/ಅಥವಾ ಎಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್ ('ಎಚ್‌ಡಿಎಫ್‌ಸಿ ಬ್ಯಾಂಕ್'/'ದ ಬ್ಯಾಂಕ್' ಅಥವಾ ಅವರ ಅಧಿಕೃತ ಏಜಂಟ್‌ರು ಅಗತ್ಯವಿದ್ದಾಗ ಕೋರಿಕೊಂಡಾಗ ಯಾವುದೇ ಅತಿರಿಕ್ತ ಮಾಹಿತಿ/ದಸ್ತಾವೇಜನ್ನು ನಾನು ಒದಗಿಸುವೆನೆಂದು ಒಪ್ಪುತ್ತೇನೆ ಮತ್ತು ವಾಗ್ದಾನ ಮಾಡುತ್ತೇನೆ. ಈ ಅಪ್ಲಿಕೇಶನ್ ಫಾರ್ಮ್‌ನೊಂದಿಗೆ ಸಲ್ಲಿಸಲಾದ ದಸ್ತಾವೇಜುಗಳು ಯಥಾರ್ಥವಾಗಿವೆ ಮತ್ತು ಈ ಅಪ್ಲಿಕೇಶನ್ ಫಾರ್ಮ್‌ನಲ್ಲಿ ಒದಗಿಸಲಾದ ಮಾಹಿತಿಯು ಯಾವುದೇ ಕಾಯಿದೆ, ನಿಯಮ, ನಿಯಂತ್ರಣ ಅಥವಾ ಸಮಯೋಚಿತವಾಗಿ ಸರಕಾರ ಅಥವಾ ಶಾಕೀಯ ಪ್ರಾಧಿಕಾರಗಳು ಜ್ಯಾರಿಪಡಿಸುವ ಯಾವುದೇ ಶಾಸನ ಅಥವಾ ಕಾನೂನು, ಅಥವಾ ಯಾವುದೇ ಅಧಿಸೂಚನೆ, ನಿರ್ದೇಶನದ ಉಲ್ಲಂಘನೆಯಾಗಿಲ್ಲ. ಈ ಅಪ್ಲಿಕೇಶನ್ ಫಾರ್ಮ್‌ನಲ್ಲಿ ನೀಡಲಾಗಿರುವ ಮಾಹಿತಿಯಲ್ಲಿ ಏನಾದರೂ ಪರಿವರ್ತನೆ ಇದ್ದಲ್ಲಿ ನಾನು ಐಟಿಜಡ್ ಕ್ಯಾಶ್ ಕಾರ್ಡ್ ಲಿಮಿಟೆಡ್, (ಎಚ್‌ಡಿಎಫ್‌ಸಿ ಬ್ಯಾಂಕ್‌ನ ಬಿಸ್‌ನೆಸ್ ಕರೆಸ್ಪಾಂಡೆಂಟ್), ಟಾಪ್ 14ನೇ ಫ್ಲೋರ್, ಟೈಮ್ಸ್ ಟವರ್, ಕಮಲಾ ಸಿಟಿ, ಸೇನಾಪತಿ ಬಾಪಟ್ ಮಾರ್ಗ್, ಲೋವರ್ ಪರೇಲ್, ಮುಂಬಯಿ 400013, ಇವರಿಗೆ ತಪ್ಪದೇ ತಿಳಿಸುವೆನೆಂದು ಈ ಮೂಲಕ ವಾಗ್ದಾನ ಮಾಡುತ್ತೇನೆ ಮತ್ತು ನಾನು ನೀಡಿರುವ ಮಾಹಿತಿಯ ಆಧಾರದ ಮೇಲೆ ಮಾತ್ರವಲ್ಲದೆ ಮಾಹಿತಿ ನೀಡೇ ಇದ್ದ ಅಥವಾ ವಿಳಂಬಿತವಾಗಿ ನೀಡಿದ ಕಾರಣದಿಂದಾಗಿ, ಕೈಗೊಂಡ ಯಾವುದೇ ಕಾರ್ಯ ಅಥವಾ ನಡೆಸಿದ ಯಾವುದೇ ಚಟುವಟಿಕೆಯ ಫಮಸ್ವರೂಪವಾಗಿ ಉಂಟಾಗಬಹುದಾದ ಯಾವುದೇ ನಷ್ಟ, ವೆಚ್ಚ, ಹಾನಿಗಳಿಗೆ ಐಟಿಜಡ್ ಕ್ಯಾಶ್ ಕಾರ್ಡ್ ಲಿ., ಮತ್ತು/ಅಥವಾ ಎಚ್‌ಡಿಎಫ್‌ಸಿ ಬ್ಯಾಂಕ್ ಜವಾಬ್ದಾರಿಯಾಗಲಾರದೆಂದು ನಾನು ಒಪ್ಪುತ್ತೇನೆ ಮತ್ತು ಸ್ವೀಕರಿಸುತ್ತೇನೆ. ಈ ಕಾರ್ಡನ್ನು ನಾನು ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ ನಿಗದಿತಗೊಳಿಸಿದ ಸೀಮೆಯೊಳಗೆ ಬಳಸುತ್ತೇನೆ ಮತ್ತು ನಿಗದಿತ ಮರ್ಚಂಟ್‌ಗಳೊಂದಿಗೆ, ವೆಬ್‌ಸೈಟ್‌ನಲ್ಲಿ ನೀಡಿರುವಂಥ ಪ್ರಾಡಕ್ಟ್‌ಗಳು/ಸೇವೆಗಳಿಗಾಗಿ ಮರ್ಚಂಟ್‌ಗಳು ಸೂಚಿಸಿರುವ ಎಲ್ಲಾ ವ್ಯವಹಾರಗಳಿಗಾಗಿ ಈ ಕಾರ್ಡನ್ನು ಬಳಸುತ್ತೇನೆ ಎಂದು ಈ ಮೂಲಕ ಒಪ್ಪುತ್ತಿದ್ದೇನೆ ಮತ್ತು ಕಾನೂನುಬಾಹಿರವಾದ ಉದ್ದೇಶಗಳಿಗೆ/ಚಟುವಟಿಕೆಗಳಿಗೆ ಅದನ್ನು ಉಪಯೋಗಿಸುವುದಿಲ್ಲವೆಂದೂ ಒಪ್ಪುತ್ತೇನೆ. ಈ ಕಾರ್ಡನ್ನು ಬಳಸಿ ಕೈಗೊಳ್ಳಲಾಗಬಹುದಾದ ಯಾವುದೇ ಕಾನೂನು ಬಾಹಿರವಾದ/ಅಪರಾಧವಾಗಬಲ್ಲ/ಹಣದ ಹೇರಾಫೇರಿಯ ದುಷ್ಕರ್ಮಕ್ಕೆ ನಾನು ಸಹಾಯ ಮಾಡಲಾರೆ ಮಾತ್ರವಲ್ಲ ಅಂಥ ಕೆಲಸದಲ್ಲಿ ಭಾಗಿ ಕೂಡ ಆಗಲಾರೆ. ನನಗೆ ಯಾವುದೇ ಕಾರಣ ಅಥವಾ ಪರಾಮರ್ಷೆ ನೀಡದೇ ಅರ್ಜಿಯನ್ನು ತಿರಸ್ಕರಿಸುವ ಅಧಿಕಾರವನ್ನು ಐಟಿಜಡ್ ಕ್ಯಾಶ್ ಕಾರ್ಡ್ ಲಿ. ಮತ್ತು/ಅಥವಾ ಎಚ್‌ಡಿಎಫ್‌ಸಿ ಬ್ಯಾಂಕ್ ಕಾಯ್ದಿರಿಸಿಕೊಂಡಿದೆ ಎಂದು ನಾನು ಒಪ್ಪುತ್ತೇನೆ ಮತ್ತು ತಿಳಿದಿದ್ದೇನೆ. ನಾನು ಸಲ್ಲಿಸಿರುವ ಕೆವೈಸಿ ದಸ್ತಾವೇಜುಗಳು ಎಚ್‌ಡಿಎಫ್‌ಸಿ ಬ್ಯಾಂಕ್‌ನ ಆವಶ್ಯಕತೆಯ ಅನುಸಾರ ಇಲ್ಲದಿದ್ದರೆ, ಐಟಿಜಡ್ ಕ್ಯಾಶ್ ಕಾರ್ಡ್ ಲಿ. ಮತ್ತು/ಅಥವಾ ಎಚ್‌ಡಿಎಫ್‌ಸಿ ಬ್ಯಾಂಕ್ ಅಗತ್ಯದ ಕ್ರಮವನ್ನು ಕೈಗೊಳ್ಳಬಹುದೆಂದು ನಾನು ಒಪ್ಪುತ್ತೇನೆ. ಫೊಟೊಗ್ರಾಫ್ ಸಹಿತ, ಅಪ್ಲಿಕೇಶನ್ ಫಾರ್ಮ್ ಮತ್ತು ಅದರೊಂದಿಗೆ ಒದಗಿಸಲಾಗದ ದಸ್ತಾವೇಜುಗಳನ್ನು ಉಳಿಸಿಕೊಳ್ಳುವ ಮತ್ತು ಅವನ್ನು ನನಗೆ ಹಿಂತಿರುಗಿಸದೇ ಇರುವ ಅಧಿಕಾರವನ್ನು ಎಚ್‌ಡಿಎಫ್‌ಸಿ ಬ್ಯಾಂಕ್ ಕಾಯ್ದಿರಿಸಿಕೊಂಡಿದೆ ಎಂದು ನಾನು ಒಪ್ಪುತ್ತೇನೆ ಹಾಗೂ ತಿಳಿದಿದ್ದೇನೆ. ಇದರಿಂದ ಪ್ರಕ್ರಿಯೆಗೊಳಪಡಿಸಿದ ಮಾಹಿತಿ/ಡೇಟಾ/ಪ್ರಾಡಕ್ಟ್‌ಗಳನ್ನು ಇತರ ಬ್ಯಾಂಕ್‌ಗಳು/ಆರ್ಥಿಕ ಸಂಸ್ಥೆಗಳು/ಸಾಲ ನೀಡುವವರು/ಯಾವುದೇ ಶಾಸಕೀಯ ಹಾಗೂ ನಿಯಂತ್ರಕ ಪ್ರಾಧಿಕಾರಗಳಿಗೆ ಒದಗಿಸಿರುವುದಕ್ಕಾಗಿ ಐಟಿಜಡ್ ಕ್ಯಾಶ್ ಕಾರ್ಡ್ ಲಿ. ಮತ್ತು/ಅಥವಾ ಎಚ್‌ಡಿಎಫ್‌ಸಿ ಬ್ಯಾಂಕ್‌ನ್ನು ನಾನು ಜವಾಬ್ದಾರಿ ಮಾಡಲಾರೆ.

ನಾನು/ನಾವು ಈ ಮೂಲಕ, ವೈಯಕ್ತಿಕ ಡೆಟಾಗೆ ಸಂಬಂಧಿಸಿದ ಮತ್ತು ನನ್ನ/ನಮ್ಮ ಬಗ್ಗೆ ಸಂವೇದನಶೀಲ ಮಾಹಿತಿ, ಕಾಗದ-ಪತ್ರಗಳು ಮತ್ತು ಕೆವೈಸಿಗೆ ಸಂಬಂಧಿಸಿದ ಡೆಟಾ, ಕ್ರೆಡಿಟ್ ಮಾಹಿತಿ, ಮತ್ತು ನನ್ನ/ನಮ್ಮ ವಿಷಯದಲ್ಲಿ ಬೇರೆ ಯಾವುದೇ ಮಾಹಿತಿ ಅಥವಾ ತನ್ನ ಉದ್ದೇಶಗಳಿಗಾಗಿ ಬ್ಯಾಂಕ್ ಸಂಬಂಧಪಟ್ಟದ್ದೆಂದು ಅಂದುಕೊಳ್ಳದೆ ಇರುವಂಥ ಮಾಹಿತಿಯನ್ನು (ಸಮುಚ್ಚಿತವಾಗಿ, 'ಮಾಹಿತಿ') ಈ ಕೆಳಗಿನವುಗಳಲ್ಲಿ ಯಾವುದನ್ನಾದರೂ ಮಾಡಲು ಮತ್ತು ವಾಗ್ದಾನ ಮಾಡಲು ಬ್ಯಾಂಕಿಗೆ (ಸ್ವಥ ಅಥವಾ ತಮ್ಮ ಯಾವುದೇ ಸರ್ವಿಸ್ ಪ್ರೊವೈಡರ್ ಮೂಲಕ ಮತ್ತು ಆಟೋಮೇಟೆಡ್ ರೀತಿಯಲ್ಲಾಗಲಿ ಇನ್ನ್ಯಾವುದೇ ರೀತಿಯಲ್ಲಿ ಕಾರ್ಯ ನಿರ್ವಹಿಸುವಾಗ) ಈ ಮೂಲಕ ಸ್ಪಷ್ಟವಾದ ಸಮ್ಮತಿ ನೀಡುತ್ತಿದ್ದೇನೆ:

i) ಮಾಹಿತಿಯನ್ನು ಕ್ರೆಡಿಟ್ ಇನ್‌ಫಾರ್ಮೇಶನ್ ಕಂಪೆನಿಗಳು, ವೆಬ್‌ಸೈಟ್, ಡೆಟಾ ಬೇಸ್‌ಗಳು ಮತ್ತು ಆನ್‌ಲೈನ್ ಪ್ಲ್ಯಾಟ್‌ಫಾರ್ಮ್‌ಗಳನ್ನು (ಸಾರ್ವಜನಿಕವಾರಲಿ ಅಥವಾ ಇಲ್ಲದಿರಲಿ) ಕೋರಿಕೊಳ್ಳುವುದನ್ನೂ ಸೇರಿಕೊಂಡು, ನನ್ನಿಂದ ಮತ್ತು ಬೇರೆ ಭೌತಿಕ ಅಥವಾ ಆನ್‌ಲೈನ್ ಮೂಲದಿಂದ ಪಡೆಯಲು; ಆನ್‌ಲೈನ್ ಡೆಟಾ ಬೇಸ್ ಸೇರಿಕೊಂಡು, ಯಾವುದೇ ಮೂಲ ಗಳು ಮತ್ತು ವ್ಯಕ್ತಿಗಳಿಂದ ಮಾಹಿತಿಯನ್ನು ದೃಢೀಕರಿಸಿ ವಿಶ್ವಾಸಾರ್ಹತೆ, ನಿಖರತೆ, ಯಥೇಷ್ಟತೆ, ಇತ್ಯಾದಿಗಳನ್ನು ಪಡೆಯುವುದು; ಮತ್ತು ಆನ್‌ಲೈನ್ ಪ್ಲ್ಯಾಟ್‌ಫಾರ್ಮ್‌ಗಳಲ್ಲಿ ನನ್ನ/ನಮ್ಮ ಲಾಗ್ ಇನ್ ಮತ್ತು ಪಾಸ್‌ವರ್ಡ್ ರುಜುವಾತುಗಳನ್ನು ಬಳಸುವುದನ್ನು ಸೇರಿಕೊಂಡು, ಅಂಥ ಮಾಹಿತಿಯ ಪಡೆಯುವಿಕೆ, ಸಂಗ್ರಹಿಸುವಿಕೆ ಅಥವಾ ದೃಢೀಕರಣಕ್ಕಾಗಿ ನನ್ನ/ನಮ್ಮ ಬಾಬ್ತು ಮತ್ತು ಪರವಾಗಿ ಕಾರ್ಣ ನಿರ್ವಹಿಸುವುದು; ಅಂಥ ಸಂಗ್ರಹಿಸುವಿಕೆ, ಪಡೆಯುವಿಕೆ ಮತ್ತು ದಢೀಕರಣವನ್ನು ನನಗೆ/ನಮಗೆ ಯಾವ ಸೂಚನೆ ನೀಡದೆ ಮಾಡಲಾಗಬಹುದು;

ii) ವಿಂಗಡಿಸುವ, ಸಂರಚನೆ, ಸಂಘಟನೆ, ಪುನರುತ್ಪಾದನೆ, ಪ್ರತಿ ನಿರ್ಮಾಣ, ಬಳಕೆ, ವ್ಯಕ್ತಿಚಿತ್ರಣ, ಇತ್ಯಾದಿಗಳ ಮೂಲಕ ಸೇರಿದಂತೆ, ಬ್ಯಾಂಕ್ ಯೋಗ್ಯವೆಂದು ಪರಿಗಣಿಸುವ ಅನುಸಾರ ಮಾಹಿತಿಯ ಪ್ರಕ್ರಿಯೆ;

iii) ಕಾನೂನಿನ ಅನುಸಾರ ಅಥವಾ ಮ್ಯಾಂಕ್‌ನ ಪುರಾವೆ ಹಾಗೂ ದಾವೆಗಳ ಪ್ರಕ್ರಿಯೆಗಾಗಿ ಬೇಕಾಗುವಂತೆ, ಯಾವುದಕ್ಕೆ ಹೆಚ್ಚು ಸಮಯ ತಗಲುವುದೋ ಅಲ್ಲಿಯ ವರೆಗೆ ಅಂಥ ಮಾಹಿತಿಯನ್ನು ಶೇಖರಿಸಿಡಲು;

iv) ಸರ್ವಿಸ್ ಪ್ರೊವೈಡರ್‌ಗಳು, ಕನ್ಸಲ್ಟೆಂಟ್‌ಗಳು, ಕ್ರೆಡಿಟ್ ಇನ್‌ಫಾರ್ಮೇಶನ್ ಕಂಪೆನಿಗಳು, ಇತರ ಬ್ಯಾಂಕ್‌ಗಳು ಮತ್ತು ಆರ್ಥಿಕ ಸಂಸ್ಥೆಗಳು, ಸಹಯೋಗಿಗಳು, ಉಪ-ಸಂಸ್ಥೆಗಳು, ನಿಯಂತ್ರಕರು, ಪರಿಶೋಧಕ ಏಜನ್ಸಿಗಳು, ಜ್ಯುಡೀಶಿಯಲ್, ಕ್ವಾಸಿ-ಜ್ಯುಡೀಶಿಯಲ್ ಹಾಗೂ ಶಾಸಕೀಯ ಪ್ರಾಧಿಕಾರಗಳೊಂದಿಗೆ ಅಥವಾ ಕರಾರಿನ ಅಥವಾ ಕಾನೂನಿನ ಆವಶ್ಯಕತೆಗೆ ಸಂಬಂಧಿಸಿದಂತೆ ಆವಶ್ಯಕವಾಗಬಹುದಾದ ಬೇರೆ ವ್ಯಕ್ತಿಗಳೊಂದಿಗೆ ಅಥವಾ ಬ್ಯಾಂಕ್‌ನ ನ್ಯಾಯಸಮ್ಮತ ಆಸಕ್ತಿ ಅಥವಾ ಸಮ್ಮತಿಯ ಅನುಸಾರ ಮಾಹಿತಿಯನ್ನು ಹಂಚಿಕೊಳ್ಳಲಿಕ್ಕಾಗಿ ಮತ್ತು ಬಹಿರಂಗಪಡಿಸಲಿಕ್ಕಾಗಿ;

v) ಮೇಲ್ಕಾಣಿಸಿದ ಉದೇಶಗಳಿಗಾಗಿ, ಕ್ರೆಡಿಟ್ ಅಪ್ರೈಸಲ್‌ನ ಉದ್ದೇಶಕ್ಕಾಗಿ, ಮೋಸ ಪತ್ತೆಹಚ್ಚಲಿಕ್ಕಾಗಿ, ಆ್ಯಂಟಿ-ಮನಿ ಲಾಂಡರಿಂಗ್ ಜವಾಬ್ದಾರಿಗಾಗಿ, ಒಪ್ಪಂದ ಮಾಡಿಕೊಳ್ಳಲಿಕ್ಕಾಗಿ, ಡೈರೆಕ್ಟ್ ಮಾರ್ಕೆಟಿಂಗ್‌ಗಾಗಿ, ಕ್ರೆಡಿಟ್ ಸ್ಕೋರಿಂಗ್ ಮಾಡೆಲ್‌ಗಳನ್ನು ವಿಕಾಸಗೊಳಿಸಲು ಮತ್ತು ಬಿಸ್‌ನೆಸ್ ಸ್ಟ್ರಟಜಿಗಳಿಗಾಗಿ, ಮಾನಿಟರಿಂಗ್‌ಗಾಗಿ, ಸರ್ವಿಸ್ ಹಾಗೂ ಪ್ರಾಡಕ್ಟ್‌ಗಳ ಕ್ವಾಲಿಟಿಯ ಮೌಲ್ಯಾಂಕನ ಹಾಗೂ ಸುಧಾರಣೆಗಾಗಿ, ಇತರ ನ್ಯಾಯಸಮ್ಮತ ಉದ್ದೇಶಗಳಿಗಾಗಿ ಅಥವಾ ಸಮ್ಮತಿಯಿಂದ ಬೇರೆ ಯಾವುದೇ ಉದ್ದೇಶಕ್ಕಾಗಿ ಬ್ಯಾಂಕ್ ಮೇಲ್ಕಾಣಿಸಿದ ಯಾವುದನ್ನೂ ಕೈಗೊಳ್ಳಬಹುದು.

ನಾನು/ನಾವು, ಬ್ಯಾಂಕ್‌ನಿಂದ ಅಥವಾ ಪರವಾಗಿ ಆಟೋಮೇಟೆಡ್ ಪ್ರೋಸೆಸಿಂಗ್, ಆಟೋಮೇಟೆಡ್ ಪ್ರೊಫೈಲಿಂಗ್ ಮತ್ತು ಆಟೋಮೇಟೆಡ್ ನಿರ್ಧಾರ ತಳೆಯುವಿಕೆಯನ್ನು ಸ್ಪಷ್ಟವಾಗಿ ಒಪ್ಪುತ್ತೇವೆ ಮತ್ತು ನನ್ನನ್ನು/ನಮ್ಮನ್ನು ಒಡ್ಡಿಕೊಳ್ಳುತ್ತೇವೆ.

ನಾನು/ನಾವು, ಬ್ಯಾಂಕ್ ಮತ್ತು/ಅಥವಾ ಅದರ ಸಹ-ಸಂಸ್ಥೆಗಳು ಮಾಹಿತಿಯನ್ನು ಬಳಸಿಕೊಳ್ಳಲು ಮತ್ತು ಸಮಯೋಚಿತವಾಗಿ ಅವರ ಪ್ರಾಡಕ್ಟ್ ಮತ್ತು ಸೇವೆಗಳನ್ನು ನನಗೆ/ನಮಗೆ ಕ್ರಾಸ್-ಸೆಲ್ಲಿಂಗ್ ಮಾಡಲು ಸ್ಪಷ್ಟವಾಗಿ ಒಪ್ಪುತ್ತೇವೆ.

ಗ್ರಾಹಕರ ಸಹಿ

ಔಟ್‌ಲೆಟ್‌ನ ಸ್ಟ್ಯಾಂಪ್ ಮತ್ತು ಸಹಿ

---

**ರಸೀದಿ**

ಕ್ರಮ ಸಂ. :

ದೊರಕಿದ ಮೊಬಲಗು :

ತಾರೀಖು :

ಔಟ್‌ಲೆಟ್ ಕೋಡ್ :

ಔಟ್‌ಲೆಟ್‌ನ ಸ್ಟ್ಯಾಂಪ್/ಸಹಿ

ಔಟ್‌ಲೆಟ್‌ನ ಹೆಸರು : ______________________

ಸ್ಥಳ : ______________________

# ಅತಿ ಮುಖ್ಯ ನಿಬಂಧನೆ ಮತ್ತು ಷರತ್ತುಗಳು

ಈ ಎಚ್‌ಡಿಎಫ್‌ಸಿ ಇಬಿಕ್ಸ್‌ಕ್ಯಾಶ್ ಪ್ರೀಪೇಯ್ಡ್ ಕಾರ್ಡನ್ನು ನಿಮಗೆ ಎಚ್‌ಡಿಎಫ್‌ಸಿ ಬ್ಯಾಂಕ್ ನೀಡುತ್ತಿದೆ. ಈ ಬ್ಯಾಂಕಿಂಗ್ ಕಂಪೆನಿಯು ಕಂಪೆನೀಸ್ ಆ್ಯಕ್ಟ್, 1956ರ ಅಂತರ್ಗತ ಸ್ಥಾಪಿತವಾಗಿದೆ ಮತ್ತು ಬ್ಯಾಂಕಿಂಗ್ ರೆಗ್ಯುಲೇಶನ್ ಆ್ಯಕ್ಟ್, 1949ರ ಅರ್ಥಾನುಸಾರ ಬ್ಯಾಂಕ್ ಎಂದು ಲೈಸೆನ್ಸ್ ಪಡೆದಿದೆ. ಇದು ತನ್ನ ರಿಜಿಸ್ಟರ್ಡ್ ಹಾಗೂ ಕಾರ್ಪೊರೇಟ್ ಆಫೀಸನ್ನು ಈ ವಿಳಾಸದಲ್ಲಿ ಹೊಂದಿದೆ – ಎಚ್‌ಡಿಎಫ್‌ಸಿ ಬ್ಯಾಂಕ್ ಲಿ., ವನ್ ಇಂಡಿಯಾ ಬುಲ್ಸ್ ಸೆಂಟರ್, ಟವರ್ 2ಬಿ, 6ನೇ ಮಹಡಿ, 841, ಸೇನಾಪತಿ ಬಾಪಟ್ ಮಾರ್ಗ್, ಲೋವರ್ ಪರೇಲ್ (ಪ), ಮುಂಬಯಿ 400013 ('ಎಚ್‌ಡಿಎಫ್‌ಸಿ ಬ್ಯಾಂಕ್'). ಐಟಿಜಡ್ ಕ್ಯಾಶ್ ಕಾರ್ಡ್ ಲಿಮಿಟೆಡ್, ಇದು ಕಂಪೆನೀಸ್ ಆ್ಯಕ್ಟ್, 1956ರ ಸ್ಥಾಪಿತ ಕಂಪೆನಿಯಾಗಿದ್ದು ತನ್ನ ರಿಜಿಸ್ಟರ್ಡ್ ಆಫೀಸನ್ನು ಈ ವಿಳಾಸದಲ್ಲಿ ಹೊಂದಿದೆ – ಟಾಪ್ 14ನೇ ಫ್ಲೋರ್, ಟೈಮ್ಸ್ ಟವರ್, ಕಮಲಾ ಸಿಟಿ, ಸೇನಾಪತಿ ಬಾಪಟ್ ಮಾರ್ಗ್, ಲೋವರ್ ಪರೇಲ್, ಮುಂಬಯಿ 400013 ('ಇಬಿಕ್ಸ್ ಕ್ಯಾಶ್'). ಎಚ್‌ಡಿಎಫ್‌ಸಿ ಬ್ಯಾಂಕ್ ಇಬಿಕ್ಸ್‌ಕ್ಯಾಶ್, ಇದನ್ನು ಎಚ್‌ಡಿಎಫ್‌ಸಿ ಬ್ಯಾಂಕ್ ಇಬಿಕ್ಸ್‌ಕ್ಯಾಶ್ ಪ್ರೀಪೇಯ್ಡ್ ಕಾರ್ಡ್‌ಗಾಗಿ ಬಿಸಿನೆಸ್ ಕರೆಸ್ಪಾಂಡೆಂಟ್ ಹಾಗೂ ಪ್ರೋಗ್ರಾಮ್ ಮೆನೇಜರ್ ಆಗಿ ನಿಯುಕ್ತಿಗೊಳಿಸಿದೆ.

**(ನಿಬಂಧನೆಗಳು ಮತ್ತು ಷರತ್ತುಗಳು)** ಈ ನಿಬಂಧನೆಗಳು ಮತ್ತು ಷರತ್ತುಗಳು ಹಾಗೂ ಇಬಿಕ್ಸ್‌ಕ್ಯಾಶ್ ವೆಬ್‌ಸೈಟ್ ನಲ್ಲಿ, ಅಂದರೆ www.ebixcash.comನಲ್ಲಿ ನೀಡಲಾಗಿರುವ ನಿಬಂಧನೆಗಳು ಮತ್ತು ಷರತ್ತುಗಳನ್ನು ಒಳಗೊಂಡು ಯಾವುದೇ ಲಗತ್ತಿಸುವಿಕೆಗಳು ಅಥವಾ ಸಂಗಡ ನೀಡಲಾಗಿರುವ ಅನುಬಂಧಗಳು (ಒಟ್ಟಾಗಿ 'ನಿಬಂಧನೆಗಳು ಮತ್ತು ಷರತ್ತುಗಳು'), ಇಬಿಕ್ಸ್‌ಕ್ಯಾಶ್/ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಗ್ರಾಹಕರ ನಡುವಿನ ಒಪ್ಪಂದದ ಅನುಸಾರ ನೀವು ('ಕಾರ್ಡ್‌ಹೋಲ್ಡರ್') ಹೊಂದಿರುವ ಇಬಿಕ್ಸ್‌ಕ್ಯಾಶ್/ಎಚ್‌ಡಿಎಫ್‌ಸಿ ಬ್ಯಾಂಕ್‌ನ ಕೋಬ್ರಾಂಡ್ ಪ್ರೀಪೇಯ್ಡ್ ಕಾರ್ಡ್‌ನ ('ಕಾಡ್') ಬಳಕೆಯನ್ನು ಆವರಿಸುತ್ತವೆ. ನಿಬಂಧನೆ ಹಾಗೂ ಷರತ್ತುಗಳನ್ನು ಪಾಲಿಸುವೆನೆಂದು ಕಾರ್ಡ್ ಹೋಲ್ಡರ್ ಈ ಮೂಲಕ ಒಪ್ಪಿಕೊಳ್ಳುತ್ತಾರೆ ಮತ್ತು ಕಾರ್ಡ್‌ನಿಂದ ವ್ಯವಹಾರವನ್ನು ಕೈಗೊಂಡಾಗ ಅಥವಾ ಕಾರ್ಡ್ ದೊರಕಿರುವ ಬಗ್ಗೆ ಲಿಖಿತ ರಸೀದಿ ನೀಡಿದಾಗ ಅಥವಾ ಕಾರ್ಡ್‌ನ ಹಿಂಬದಿಯಲ್ಲಿ ಸಹಿ ಮಾಡಿದಾಗ, ನಿಬಂಧನೆ ಹಾಗೂ ಷರತ್ತುಗಳನ್ನು ಅವರು ಬೇಷರತ್ ಒಪ್ಪಿಕೊಂಡಿರುವರೆಂದು ಪರಿಗಣಿಸಲಾಗುತ್ತದೆ ಮತ್ತು ಎಲ್ಲಾ ನಿಬಂಧನೆ ಹಾಗೂ ಷರತ್ತುಗಳನ್ನು ಅವರು ಓದಿದ್ದಾರೆ ಮತ್ತು ಅರ್ಥಮಾಡಿಕೊಂಡಿದ್ದಾರೆ ಎಂದೂ ಪರಿಗಣಿಸಲಾಗುತ್ತದೆ. ಕಾರ್ಡ್‌ನ ಬಳಕೆಯನ್ನು ಆವರಿಸಿರುವ ಸಂಬಂಧಪಟ್ಟ ಅಧಿಸೂಚನೆಗಳು/ಮಾರ್ಗದರ್ಶನಗಳು/ಸುತ್ತೋಲೆಗಳಲ್ಲಿನ ಯಾವುದೇ ಪರಿವರ್ತನೆಗಳು/ತಿದ್ದುಪಡಿಗಳೊಂದಿಗೆ ಕಾರ್ಡ್‌ಹೋಲ್ಡರ್ ಪರಿಚಿತರಾಗಿರುವುದು ಆತನ/ಆಕೆಯ ಜವಾಬ್ದಾರಿಯಾಗಿದೆ. ಕಾರ್ಡ್‌ನ ಬಳಕೆಗೆ ಸಂಬಂಧಪಟ್ಟ ಮತ್ತು ಸಮಯೋಚಿತವಾಗಿ ಜ್ಯಾರಿಪಡಿಸಲಾಗಬಹುದಾದ ಅಂಥ ಅಧಿಸೂಚನೆಗಳು/ಮಾರ್ಗದರ್ಶನಗಳು/ಸುತ್ತೋಲೆಗಳ ಉಲ್ಲಂಘನೆಯನ್ನು ಕಾರ್ಡ್‌ಹೋಲ್ಡರ್ ಮಾಡಿದರೆ ಅದರ ಜವಾಬ್ದಾರಿಯು ಬ್ಯಾಂಕ್‌ನ ನಕಾರಾತ್ಮಕ ದಾವೆಯಾಗಿರುತ್ತದೆ. ನಿಬಂಧನೆಗಳು ಮತ್ತು ಷರತ್ತುಗಳು ಸ್ವೀಕಾರಾರ್ಹವಲ್ಲದಿದ್ದರೆ, ಕಾರ್ಡ್‌ಧಾರಕರು ಕಾರ್ಡನ್ನು ಬಳಸಬಾರದು ಮತ್ತು ತಕ್ಷಣವೇ ಅದನ್ನು ಇಬಿಕ್ಸ್‌ಕ್ಯಾಶ್/ಎಚ್‌ಡಿಎಫ್‌ಸಿ ಬ್ಯಾಂಕ್‌ಗೆ ಮರಳಿಸಬೇಕು.

**(ಕಾರ್ಡ್ ಅಕೌಂಟ್ ವಿವರಗಳನ್ನು ಪಡೆಯುವುದು)** ಲಭ್ಯವಿರುವ ಬ್ಯಾಲೆನ್ಸ್ ಸಹಿತ ('ಕಾರ್ಡ್ ಬ್ಯಾಲೆನ್ಸ್'), ಕಾರ್ಡ್‌ಗೆ ಸಂಬಂಧಪಟ್ಟ ಮಾಹಿತಿಯನ್ನು www.ebixcash.comನಲ್ಲಿ ಲಾಗ್ ಇನ್ ಮಾಡಿ ಪಡೆಯಬಹುದು ಅಥವಾ ಕಾರ್ಡ್‌ನ ಹಿಂಬದಿಯಲ್ಲಿ ನೀಡಲಾಗಿರುವ ಕಸ್ಟಮರ್ ಸೆಂಟರ್‌ಗೆ ಫೋನ್ ಮಾಡಿ ಮತ್ತು/ಅಥವಾ ನೀಡಲಾಗಿರುವ ಇಮೇಲ್ ವಿಳಾಸದಲ್ಲಿ ಲಿಖಿತವಾಗಿ ಕೋರಿಕೊಂಡು ಪಡೆಯಬಹುದು.

### 1. ಬಳಕೆ, ಲಿಮಿಟ್ ಮತ್ತು ಸೆಕ್ಯುರಿಟಿ

(ಬಳಕೆ) ಕಾರ್ಡ್‌ನ ನೀಡಿಕೆ ಮತ್ತು ಬಳಕೆಯು, ಸಮಯೋಚಿತವಾಗಿ ಎಚ್‌ಡಿಎಫ್‌ಸಿ ಬ್ಯಾಂಕ್ ಜ್ಯಾರಿಪಡಿಸುವ ನಿಬಂಧನೆ ಹಾಗೂ ಷರತ್ತುಗಳನ್ನು ಅನ್ವಯಿಸುತ್ತದೆ. ಕಾರ್ಡ್‌ಹೋಲ್ಡರ್ ಈ ಕಾರ್ಡನ್ನು ಭಾರತದಲ್ಲಿ ಮಾತ್ರ ಮರ್ಚಂಟ್‌ಗಳಿಂದ ರೂಪಾಯಿ ಮೌಲ್ಯದಲ್ಲಿ ಸಾಮಾನು ಮತ್ತು ಸೇವೆಗಳನ್ನು ಖರೀದಿಸಲಿಕ್ಕಾಗಿ ಬಳಸಬೇಕು.

(ಹಸ್ತಾಂತರಣ) ಕಾರ್ಡ್‌ಹೋಲ್ಡರ್‌ರಿಂದ ಯಾವುದೇ ಸಂದರ್ಭದಲ್ಲಿ ಈ ಕಾರ್ಡ್‌ನ ಹಸ್ತಾಂತರಿಸುವಿಕೆ ಅಥವಾ ಅಸೈನ್ ಮಾಡುವಿಕೆ ಸಾಧ್ಯವಿಲ್ಲ.

(ಕಳೆದು ಹೋದ ಮತ್ತು ಕಳುವಾದ ಕಾರ್ಡ್‌ಗಳು) ಕಾರ್ಡ್ ಅಥವಾ ಅದರ ಪಿನ್ ಕಳೆದು ಹೋದರೆ, ಕಳುವಾದರೆ ಅಥವಾ ತಪ್ಪು ಬಳಕೆಯಾದರೆ, ದಯವಿಟ್ಟು ತಕ್ಷಣವೇ ಕಾರ್ಡ್‌ನ ಹಿಂಬದಿಯಲ್ಲಿ ನೀಡಲಾಗಿರುವ ಟೆಲಿಫೋನ್ ನಂಬರ್‌ನಲ್ಲಿ ಕಸ್ಟಮರ್ ಸರ್ವಿಸ್ ಸೆಂಟರ್‌ಗೆ ('ಕಸ್ಟಮರ್ ಸರ್ವಿಸ್ ಸೆಂಟರ್') ತಿಳಿಸಿರಿ. ಪಿನ್‌ನ್ನು ನೀವು ನೆನಪಿಟ್ಟುಕೊಂಡು ಪಿನ್ ಮೇಲರ್‌ನ್ನು ತಕ್ಷಣವೇ ನಾಶ ಮಾಡಬೇಕು. ವರದಿ ಮಾಡಿದ 24 ಗಂಟೆಗಳಲ್ಲಿ ಕಾರ್ಡನ್ನು ಬ್ಲಾಕ್ ಮಾಡಲಾಗುತ್ತದೆ ಮತ್ತು ನಿಮ್ಮ ಹಣದ ಅಪಾಯದ ಸಂರಕ್ಷಣೆಯು ಕಾರ್ಡ್ ಕಳೆದುಹೋಗಿರುವುದನ್ನು ನೀವು ವರದಿ ಮಾಡಿದ ಸಮಯದಿಂದ ಶುರುವಾಗುತ್ತದೆ. ಕಳೆದು ಹೋದ ಕಾರ್ಡ್‌ನ ಬದಲಿಗೆ, ಅನ್ವಯಿಸುವ ಶುಲ್ಕವನ್ನು ಪಡೆದುಕೊಂಡು, ಇಬಿಕ್ಸ್‌ಖ್ಯಾಶ್/ಎಚ್‌ಡಿಎಫ್‌ಸಿ ಬ್ಯಾಂಕ್ ತನ್ನ ಸ್ವಂಥ ನಿಷ್ಕರ್ಷೆಯ ಮೇರೆಗೆ ಮತ್ತು ಕಾರ್ಡ್‌ಹೋಲ್ಡರ್‌ರ ಪರಿಚಯದ ದೃಢೀಕರಣ ಪಡೆದು ಹೊಸ ಕಾರ್ಡನ್ನು ನೀಡಬಹುದು.

(ನ್ಯಾಯಬದ್ಧತೆ) ಕಾರ್ಡ್‌ಹೋಲ್ಡರ್ ಕಾರ್ಡನ್ನು ಕೇವಲ ನ್ಯಾಯ ಸಮ್ಮತ ಉದ್ದೇಶಗಳಿಗಾಗಿ ನ್ಯಾಯ ಸಮ್ಮತ ರೀತಿಯಲ್ಲಿ ಮಾತ್ರ ಬಳಸಬೇಕು.

(ತೃತೀಯ ವ್ಯಕ್ತಿಯಿಂದ ಬಳಕೆ) ಅನಧಿಕೃತ ಬಳಕೆಯ ವಿರುದ್ಧ ಕಾರ್ಡ್‌ಹೋಲ್ಡರ್‌ರ ಹಿತಾಸಕ್ತಿಯನ್ನು ಸಂರಕ್ಷಿಸಲಿಕ್ಕಾಗಿ ಎಲ್ಲಾ ಸಮಯದಲ್ಲೂ ನೀವು ನಿಮ್ಮ ಕಾರ್ಡನ್ನು ನಿಮ್ಮ ವ್ಯಕ್ತಿಗತ ಹದ್ದುಬಸ್ತಿನಲ್ಲೇ ಇರಿಸಿಕೊಳ್ಳಬೇಕೆಂದು ಸಲಹೆ ನೀಡಲಾಗುತ್ತದೆ.

(ಜವಾಬ್ದಾರಿ) ಕಾರ್ಡ್‌ಹೋಲ್ಡರ್ ಪಡೆದ ವಸ್ತು ಮತ್ತು ಸೇವೆಗಳಿಗೆ ಸಂಬಂಧಪಟ್ಟಂತೆ, ಅವುಗಳ ಗುಣಮಟ್ಟ, ಮೌಲ್ಯ, ವಾರಂಟಿ, ಡೆಲಿವರಿಯಲ್ಲಿ ವಿಳಂಬ, ಡೆಲಿವರಿ ಆಗದೇ ಇರುವುದು, ಯಾವುದೇ ವಸ್ತು ಅಥವಾ ಸೇವೆ ದೊರಕದೇ ಇರುವುದು, ಇತ್ಯಾದಿಗಳಿಗೆ ಸಂಬಧಿಸಿದ ಯಾವುದೇ ವಿವಾದಕ್ಕೆ ಬ್ಯಾಂಕ್ ಆಗಲೀ ಇಬಿಕ್ಸ್‌ಕ್ಯಾಶ್ ಆಗಲೀ ಜವಾಬ್ದಾರಿಯಾಗಲಾರದು. ಮರ್ಚಂಟ್‌ಗಳಿಗೆ ಕಾರ್ಡ್‌ಹೋಲ್ಡರ್ ಹಣ ಸಂದಾಯ ಮಾಡಲು ಸಹಾಯ ಮಾಡುವುದಕ್ಕೆ ಮಾತ್ರ ಕಾರ್ಡ್ ಇರುವುದಲ್ಲದೇ ಬ್ಯಾಂಕ್ ಯಾವುದೇ ವಾರಂಟಿ ನೀಡುತ್ತಿಲ್ಲ ಅಥವಾ ಗುಣಮಟ್ಟ, ಪ್ರಮಾಣ, ಮೌಲ್ಯ, ಡೆಲಿವರಿ ಅಥವಾ ಬೇರೆ ಏನನ್ನೂ ಪ್ರತಿನಿಧೀಕರಿಸುವುದಿಲ್ಲ. ಆದರೆ ವಸ್ತು ಅಥವಾ ಸೇವೆಗಳ ಸಂಬಂಧದಲ್ಲಿ ಮತ್ತು ಅಂಥ ಯಾವುದೇ ವಿವಾದವಿದ್ದಲ್ಲಿ ಅವನ್ನು ಕಾರ್ಡ್‌ಹೋಲ್ಡರ್ ನೇರವಾಗಿ ಮರ್ಚಂಟ್‌ಗಳಿಂದ ಬಗೆಹರಿಸಿಕೊಳ್ಳಬೇಕು.

(ಕಾರ್ಡ್ ಬ್ಯಾಲಎಂಸ್‌ನಲ್ಲಿ ಪರಿವರ್ತನೆ) ವ್ಯವಹಾರದ ಹಿಂಚಲನೆ ಮಾಡಲಾದರೆ ಕಾರ್ಡ್ ಅಕೌಂಟ್‌ನಲ್ಲಿ ಕ್ರೆಡಿಟ್ ಪಡೆಯಲು ಗ್ರಾಹಕರು ಅರ್ಹರಾಗುತ್ತಾರೆ, ಕಾರ್ಡ್‌ಹೋಲ್ಡರ್‌ಗೆ ನಗದು ಹಣ ಹಿಂತಿರುಗಿಸಲಾಗುವುದಿಲ್ಲ. ಹಣವನ್ನು ಹಿಂತಿರುಗಿಸುವಾಗ ಕ್ರಮಾನುಗತ ಮರ್ಚಂಟ್ ಅನ್ವಯಿಸುವ ಚಾರ್ಜ್ ಹೇರಿದರೆ ಅದನ್ನು ಇಬಿಕ್ಸ್‌ಕ್ಯಾಶ್/ಎಚ್‌ಡಿಎಫ್‌ಸಿ ಬ್ಯಾಂಕ್ ಗಾರಹಕರಿಂದ ವಸೂಲಿ ಮಾಡಿಕೊಳ್ಳುತ್ತದೆ.

(ಟ್ರಾನ್ಸ್ಯಾಕ್ಷನ್ ಲಿಮಿಟ್) ನಿಗದಿತ ಕಾಲಾವಧಿಯಲ್ಲಿ ಕಾರ್ಡ್ ಮೂಲಕ ಮಾಡಬಹುದಾದ ವ್ಯವಹಾರದ ಹಣದ ಮೊತ್ತ ಮತ್ತು ಸಂಖ್ಯೆಯ ಮೇಲೆ ಇಬಿಕ್ಸ್‌ಕ್ಯಾಶ್/ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು/ಅಥವಾ ಮಂರ್ಚಂಟ್‌ಗಳು ಮಾರಾಟ ಸ್ಥಳದಲ್ಲಿ ಲಿಮಿಟ್‌ನ್ನು ನಿಗದಿತಗೊಳಿಸಬಹುದು. ಯಾವುದೇ ಕಾರಣಕ್ಕಾಗಿ, ಯಾವುದೇ ಸಮಯದಲ್ಲಿ ಇಬಿಕ್ಸ್‌ಕ್ಯಾಶ್/ಎಚ್‌ಡಿಎಫ್‌ಸಿ ಬ್ಯಾಂಕ್ ಈ ಟ್ರಾನ್ಸ್ಯಾಕ್ಷನ್ ಲಿಮಿಟ್ ಪರಿವರ್ತಿಸಬಹುದು. ಕಾರ್ಡ್‌ಹೋಲ್ಡರ್ Ebixcash.comನಲ್ಲಿ ಈ ಪರಿವರ್ತನೆಗಳನ್ನು ಅವಲೋಕಿಸಬಹುದು ಅಥವಾ ಕಸ್ಟಮರ್ ಸರ್ವಿಸ್ ಸೆಂಟರಿಗೆ ಕರೆ ನೀಡಿ ತಿಳಿಯಬಹುದು. ಅನ್ವಯಿಸುವ ಕಾನೂನಿನ ಅನುಸಾರ ಕಾರ್ಡ್‌ಹೋಲ್ಡರ್‌ಗೆ ಸೂಚನೆ ನೀಡಲಾಗುತ್ತದೆ.

### 2. ಅಂತ್ಯ, ರದ್ದುಪಡಿಸುವಿಕೆ ಮತ್ತು ಮುಕ್ತಾಯ

ನಿಮಗೆ ನೀಡಲಾದ ಕಾರ್ಡ್, ಅದನ್ನು ನೀಡಿದ ತಾರೀಖಿನಿಂದ (5) ಐದು ವರ್ಷಗಳ ವರೆಗೆ ಮಾನ್ಯವಾಗಿರುತ್ತದೆ. ಕಾರ್ಡ್ ಮೇಲೆ ನಮೂದಿಸಿದ ಮುಕ್ತಾಯ ದಿನಾಂಕದಂದು ಕಾರ್ಡ್‌ನ ಮುಕ್ತಾಯವಾಗುತ್ತದೆ. ಈ ಕಳಗಿನ ಸಂದರ್ಭಗಳಲ್ಲಿ ಇಬಿಕ್ಸ್‌ಕ್ಯಾಶ್/ಎಚ್‌ಡಿಎಫ್‌ಸಿ ಬ್ಯಾಂಕ್ ಕಾರ್ಡನ್ನು ತಕ್ಷಣವೇ ರದ್ದುಪಡಿಸಬಹುದು ಅಥವಾ ಅದರ ಬಳಕೆಯನ್ನು ಸ್ಥಗಿತಗೊಳಿಸಬಹುದು : (i) ಕಾರ್ಡ್‌ಹೋಲ್ಡರ್ ಕಾರ್ಡ್ ಕಳೆದುಹೋಗಿರುವುದನ್ನು ವರದಿ ಮಾಡಿದಾಗ; (ii) 90 ದಿನಗಳಿಗೂ ಹೆಚ್ಚು ಸಮಯದ ವರೆಗೆ ಕಾರ್ಡನ್ನು ಬಳಸದೇ ಇರುವಾಗ; (iii) 90 ದಿನಗಳ ವರೆಗೆ ಕಾರ್ಡ್‌ನಲ್ಲಿ ಬ್ಯಾಲೆನ್ಸ್ ಇಲ್ಲವಾಗಿರುವಾಗ; (iv) ಕಾರ್ಡ್‌ಹೋಲ್ಡರ್‌ರಿಂದ ಯಾವುದೇ ರೀತಿಯಲ್ಲಿ ನಿಬಂಧನೆ ಮತ್ತು ಷರತ್ತುಗಳ ಉಲ್ಲಂಘನೆ ನಡೆದಾಗ; (v) ಕಾರ್ಡನ್ನು ರದ್ದುಪಡಿಸಲು ಅಥವಾ ಸ್ಥಗಿತಗೊಳಿಸಲು ಕಾರ್ಪೊರೇಟ್‌ನಿಂದ ನಿರ್ದಿಷ್ಟವಾದ ಆದೇಶ ದೊರಕಿದಾಗ; ಅಥವಾ (ಡಜಿ) ಕಾರ್ಡನ್ನು ರದ್ದುಪಡಿಸುವ ಅಥವಾ ಸ್ಥಗಿತಗೊಳಿಸುವ ಸಲುವಾಗಿ ಪ್ರೋಸೆಸಿಂಗ್ ಪೇಮೆಂಟ್‌ಗಳ, ಅಥವಾ (vi) ಕಾನೂನು ಅಥವಾ ನಿಯಂತ್ರಣಗಳು ಹೇರಿರುವ ನಿರ್ಬಂಧನಗಳನ್ನೊಳಗೊಂಡು ಆದರೆ ಅಷ್ಟಕ್ಕೇ ಸೀಮಿತವಾಗಿಲ್ಲದೆ ಯೋಗ್ಯ ಮಟ್ಟದ ನಿಯಂತ್ರಣಕ್ಕೆ ಮೀರಿದ ಕಾರಣಗಳಿಗಾಗಿ ಕಾರ್ಡ್‌ಗೆ ಸಂಬಂಧಪಟ್ಟಂತೆ ಪೇಮೆಂಟ್‌ಗಳನ್ನು ಪ್ರಕ್ರಿಯೆಗೊಳಪಡಿಸಲು ಇಬಿಕ್ಸ್‌ಕ್ಯಾಶ್/ಎಚ್‌ಡಿಎಫ್‌ಸಿ ಬ್ಯಾಂಕ್‌ಗೆ ಸಾಧ್ಯವಾಗದೇ ಇರುವಾಗ ಅಥವಾ ತಡೆಯಲ್ಪಟ್ಟಾಗ.

### 3. ಕಾರ್ಡ್ ಬ್ಯಾಲೆನ್ಸ್

(ಕಾರ್ಡ್ ಬ್ಯಾಲೆನ್ಸ್) ನಿಬಂಧನೆ ಮತ್ತು ಷರತ್ತುಗಳನ್ನು ಪಾಲಿಸುತ್ತ ಕಾರ್ಡನ ಬಳಕೆಯನ್ನು ಯೋಗ್ಯವಾದ ಹಾಗೂ ಸರಿಯಾದ ರೀತಿಯಲ್ಲಿ ಮಾಡಿ ಕಾರ್ಡ್‌ಹೋಲ್ಡರ್ ಕಾರ್ಡ್‌ನ ಬ್ಯಾಲೆಂಸನ್ನು ಬಳಸಿಕೊಳ್ಳಬಹುದು. ಕಾರ್ಡ್‌ಹೋಲ್ಡರ್ ಯಾವುದೇ ಬಡ್ಡಿ ಸಂದಾಯ ಮಾಡಬೇಕಾಗುವುದಿಲ್ಲ. ಅನ್ವಯಿಸುವ ಚಾರ್ಜ್‌ಗಳ ಸಹಿತ ಅಪೇಕ್ಷಿತ ಮೊಬಲಗಿನ ಖರೀದಿ ಮಾಡಿ/ಸೇವೆ ಪಡೆದು ವ್ಯವಹಾರ ಮಾಡಲು ಕಾರ್ಡ್‌ಹೋಲ್ಡರ್‌ಗೆ ಸಲಹೆ ನೀಡಲಾಗುತ್ತದೆ, ಹಾಗೆ ಮಾಡದೇ ಇದ್ದರೆ ವ್ಯವಹಾರವನ್ನು ಮಾನ್ಯಗೊಳಿಸಲಾಗದೇ ಇರಬಹುದು.

(ಅವ್ಯವಹಾರ) ಮರ್ಚಂಟ್ ಸಂಸ್ಥೆಗಳಲ್ಲಿನ ವ್ಯವಹಾರದಲ್ಲಿ ಉಂಟಾದ ಯಾವುದೇ ಅವ್ಯವಹಾರ ಅಥವಾ ನ್ಯೂನತೆಗಳನ್ನು ವ್ಯವಹಾರದ ಪ್ರಕ್ರಿಯೆ ನಡೆದ 7 ದಿನಗಳ ಒಳಗೆ ಕಾರ್ಡ್‌ಹೋಲ್ಡರ್ ಇಬಿಕ್ಸ್‌ಕ್ಯಾಶ್‌ಗೆ ತಿಳಿಸಬೇಕು. ಈ ಕಾಲಾವಧಿಯಲ್ಲಿ ಯಾವುದೇ ಸೂಚನೆ ಬಾರದೇ ಇದ್ದರೆ, ವ್ಯವಹಾರ ಸರಿಯಾಗಿದೆ ಎಂದು ಇಬಿಕ್ಸ್‌ಕ್ಯಾಶ್ ಪರಿಗಣಿಸುತ್ತದೆ.

### 4. ಶುಲ್ಕಗಳು ಮತ್ತು ಅನ್ವಯಿಸುವ ತೆರಿಗೆಗಳು

ಇಬಿಕ್ಸ್‌ಕ್ಯಾಶ್/ಎಚ್‌ಡಿಎಫ್‌ಸಿ ಬ್ಯಾಂಕ್‌ಗೆ ಸಲ್ಲಬೇಕಾಗುವ ಎಲ್ಲಾ ಶುಲಕ್ಕಗಳು ಮತ್ತು ಚಾರ್ಜ್‌ಗಳನ್ನು ಇಬಿಕ್ಸ್‌ಕ್ಯಾಶ್/ಎಚ್‌ಡಿಎಫ್‌ಸಿ ಬ್ಯಾಂಕ್ ಕಾರ್ಡ್ ಬ್ಯಾಲೆನ್ಸ್‌ನಿಂದ ಕಡಿದುಕೊಳ್ಳುತ್ತದೆ.

### 5. ಇಬಿಕ್ಸ್‌ಕ್ಯಾಶ್/ಎಚ್‌ಡಿಎಫ್‌ಸಿ ಬ್ಯಾಂಕ್‌ನ ದಾಯಿತ್ವ

ಇಬಿಕ್ಸ್‌ಕ್ಯಾಶ್/ಎಚ್‌ಡಿಎಫ್‌ಸಿ ಬ್ಯಾಂಕ್‌ನ ದಾಯಿತ್ವವು ಯಾವುದೇ ಸಮಯದಲ್ಲಿ ಕಾರ್ಡ್‌ನಲ್ಲಿ ಉಳಿದಿರುವ ಬ್ಯಾಲೆನ್ಸ್‌ಗಷ್ಟೇ ನಿರ್ಬಂಧಿತವಾಗಿದೆ.

### 6. ಡೇಟಾ ಸಂರಕ್ಷಣೆ

ಗ್ರಾಹಕರ ನಿರ್ದೇಶಾನುಸಾರ ಕಾರ್ಡನ್ನು ಒದಗಿಸಲು, ಕಾರ್ಡನ್ನು ಅಡ್ಮಿನಿಸ್ಟರ್ ಮಾಡಲು, ಕಾರ್ಡ್ ಅಥವಾ ಅದರ ಬಳಕೆಗೆ ಸಂಬಂಧಪಟ್ಟಂತೆ ಕಾರ್ಡ್‌ಹೋಲ್ಡರ್‌ರ ಯಾವುದೇ ಪ್ರಶ್ನೆಯನ್ನು ಉತ್ತರಿಸಲು, ಅಂಕೆ-ಅಂಶಗಳ ಹಾಗೂ ನಿಯಂತ್ರಣಗಳ ಬಾಬ್ತು ಮತ್ತು ಮೋಸ ಪ್ರತಿರೋಧನೆಯ ಉದ್ದೇಶಗಳಿಗಾಗಿ, ಇಬಿಕ್ಸ್‌ಕ್ಯಾಶ್/ಎಚ್‌ಡಿಎಫ್‌ಸಿ ಬ್ಯಾಂಕ್ ಕಾರ್ಡ್‌ಹೋಲ್ಡರ್‌ರ ವ್ಯಕ್ತಿಗತ ಡೇಟಾವನ್ನು ಪ್ರಕ್ರಿಯೆಗೊಳಪಡಿಸುತ್ತದೆ.

ಇಬಿಕ್ಸ್‌ಕ್ಯಾಶ್/ಎಚ್‌ಡಿಎಫ್‌ಸಿ ಬ್ಯಾಂಕ್ ಗೋಪನೀಯವಾಗಿ ಮತ್ತು ಅನ್ವಯಿಸುವ ಡೇಟಾ ಸಂರಕ್ಷಣಾ ಕಾನೂನು ಮತ್ತು ಬ್ಯಾಂಕ್ ಗೋಪನೀಯತೆಯ ಕಾನೂನುಗಳ ಅಂತರ್ಗತ, ಕಾರ್ಡ್‌ಹೋಲ್ಡರ್‌ರ ಮಾಹಿತಿಯನ್ನು ಇತರ ಕಂಪೆನಿಗಳಿಗೆ ಮತ್ತು ಅಪ್ಲಿಕೇಶನ್ ಪ್ರೋಸೆಸಿಂಗ್, ಫ್ರಾಡ್ ಮೊನಿಟರಿಂಗ್, ಕಸ್ಟಮರ್ ಸರ್ವಿಸ್, ಕಾರ್ಡ್ ಪ್ರೊಟೆಕ್ಷನ್ ಮತ್ತು ಟೆಕ್ನಾಲಜಿ ಪ್ರೋಸೆಸಿಂಗ್ ಸರ್ವಿಸ್‌ಗಳನ್ನು ಒದಗಿಸುವವರನ್ನು ಮತ್ತು ಅವರ ಏಜಂಟರುಗಳನ್ನು ಮತ್ತು ಸಬ್‌ಕಾಂಟ್ರಾಕ್ಟರ್‌ಗಳನ್ನು ಸೇರಿಕೊಂಡು ತೃತೀಯ ವ್ಯಕ್ತಿಗಳಿಗೆ ಕಾರ್ಡ್‌ಹೋಲ್ಡರ್ ಮತ್ತು ಕಾರ್ಡ್‌ನ ಮಾಹಿತಿಯನ್ನು ಒದಗಿಸಬಹುದು.

ಇಬಿಕ್ಸ್‌ಕ್ಯಾಶ್/ಎಚ್‌ಡಿಎಫ್‌ಸಿ ಬ್ಯಾಂಕ್ ಈ ಕೆಳಗಿನವರಿಗೆ ಕಾರ್ಡ್‌ಹೋಲ್ಡರ್‌ರ ವೈಯಕ್ತಿಕ ಡೇಟಾವನ್ನು ಬಿಡುಗಡೆ ಮಾಡಬಹುದು : (i) ಗ್ರಾಹಕರಿಗೆ, (ii) ತಪ್ಪು ಅಥವಾ ಸರಿಯಾಲ್ಲದ ಮಾಹಿತಿಯನ್ನು ಒದಗಿಸಿದಾಗ ಮತ್ತು ಮೋಸದ ಅನುಮಾನವಿದ್ದಾಗ ಫ್ರಾಡ್ ಪ್ರಿವೆನ್ಶನ್ ಏಜನ್ಸಿಗಳಿಗೆ, ಮತ್ತು (iii) ಅನ್ವಯಿಸುವ ಕಾನೂನು ಅಥವಾ ನ್ಯಾಯಾಂಗ ಆದೇಶದಂತೆ ಶಾಸಕೀಯ/ನಿಯಂತ್ರಕ ಪ್ರಾಧಿಕಾರಗಳು, ಕಾನೂನು ಪಾಲಕ ಅಥವಾ ಮೋಸ ನಿರೋಧಕ ಏಜನ್ಸಿಗಳಿಗೆ ನೀಡಬೇಕಾದಗ. ಉನ್ನತ ಗುಣಮಟ್ಟದ ಸೇವೆಯನ್ನು ನೀಡುತ್ತಿರಲಿಕ್ಕಾಗಿ ಮತ್ತು ಸುರಕ್ಷೆಗಾಗಿ, ಡೇಟಾ ಕಲೆಕ್ಷನ್ ಹಾಗೂ ಟ್ರೇನಿಂಗ್‌ನ ಉದ್ದೇಶಕ್ಕಾಗಿ, ಅಥವಾ ಕಾನೂನಿನ ಅನುಸಾರ ಅಗತ್ಯವಾಗುವಂತೆ, ಇಬಿಕ್ಸ್ ಕ್ಯಾಶ್/ಎಚ್‌ಡಿಎಫ್‌ಸಿ ಬ್ಯಾಂಕ್ ಟೆಲಿಫೋನ್ ಕಾಲ್‌ಗಳನ್ನು ರೆಕಾರ್ಡ್ ಮಾಡಬಹುದು ಮತ್ತು/ಅಥವಾ ಮಾನಿಟರ್ ಮಾಡಬಹುದು. ಎಲ್ಲಾ ರೆಕಾರ್ಡಿಂಗ್‌ಗಳು ಇಬಿಕ್ಸ್‌ಕ್ಯಾಶ್/ಎಚ್‌ಡಿಎಫ್‌ಸಿ ಬ್ಯಾಂಕ್‌ನ ಸ್ವತ್ತಾಗುತ್ತವೆ. ಕಾರ್ಡ್‌ಹೋಲ್ಡರ್ ತನ್ನ ವೈಯಕ್ತಿಕ ಡೇಟಾವನ್ನು ಪ್ರಕ್ರಿಯೆಗೊಳಪಡಿಸಲು (ಟ್ರಾನ್ಸ್‌ಫರ್ ಸೇರಿ) ಇಬಿಕ್ಸ್‌ಕ್ಯಾಶ್/ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಮೇಲೆ ನಮೂದಿಸಲಾಗಿರುವ ಇತರ ಸ್ವೀಕರ್ತರಿಗೆ ಸಮ್ಮತಿ ನೀಡುತ್ತಾರೆ.

### 7. ಇತರ

(ತಿದ್ದುಪಡಿ) ಇಬಿಕ್ಸ್‌ಕ್ಯಾಶ್/ಎಚ್‌ಡಿಎಫ್‌ಸಿ ಬ್ಯಾಂಕ್ ಗ್ರಾಹಕರಿಗೆ ಯಾವ ಸೂಚನೆಯನ್ನೂ ನೀಡದೆ, ಯಾವುದೇ ಸಮಯದಲ್ಲಿ ಮತ್ತು ಅನ್ವಯಿಸುವ ಕಾನೂನಿಗೆ ಬದ್ಧವಾಗಿ, ಯಾವುದೇ ಅವಕಾಶವನ್ನು ಬದಲಾಯಿಸುವುದು ಅಥವಾ ತೆಗೆದುಹಾಕುವುದು, ಯಾವುದೇ ಶುಲ್ಕವನ್ನು ಸೇರಿಸುವುದು ಅಥವಾ ಬದಲಾಯಿಸುವುದು (ಹೆಚ್ಚಿಸುವುದು ಅಥವಾ ಕಡಿಮೆ ಮಾಡುವುದನ್ನು ಸೇರಿಕೊಂಡು) ಸಾಧ್ಯವಿದೆ.

(ಆವರಿಸುವ ಕಾನೂನು) ಈ ನಿಬಂಧನೆ ಮತ್ತು ಷರತ್ತುಗಳು ಮತ್ತು ಇದರಿಂದಾಗಿ ಉಂಟಾಗಬಹುದಾದ ಎಲ್ಲಾ ಸಂಗತಿಗಳು ಭಾರತೀಯ ಕಾನೂನುಗಳಿಗೆ ಅಧೀನವಾಗಿರುತ್ತವೆ ಮತ್ತು ಕಾರ್ಡ್‌ಹೋಲ್ಡರ್ ಹಾಗೂ ಇಬಿಕ್ಸ್ ಕ್ಯಾಶ್/ಎಚ್‌ಡಿಎಫ್‌ಸಿ ಬ್ಯಾಂಕ್, ಇಬ್ಬರೂ ಮುಂಬಯಿ ನ್ಯಾಯಾಲಯಗಳ ನ್ಯಾಯ ಪರಿಧಿಯಲ್ಲಿ ಕಾರ್ಯವೆಸಗಬೇಕಾಗುತ್ತದೆ.

### 8. ಹೆಲ್ಪ್‌ಲೈನ್

ನಮ್ಮ ಕಸ್ಟಮರ್ ಕೇರ್ ಸೆಂಟರಿನ ನಃ 7666155220ದಲ್ಲಿ ನಮಗೆ ಕರೆ ನೀಡಿರಿ ಅಥವಾ care@ebixcash.comನಲ್ಲಿ ನಮಗೆ ಈಮೇಲ್ ಕಳಿಸಿರಿ ಅಥವಾ ಈ ಕೆಳಗಿನ ವಿಳಾಸದಲ್ಲಿ ನಮಗೆ ಬರೆಯಿರಿ : ಐಟಿಜಡ್ ಕಾರ್ಡ್ ಲಿಮಿಟೆಡ್, ಟಾಪ್ 14ನೇ ಫ್ಲೋರ್, ಟೈಮ್ಸ್ ಟವರ್, ಕಮಲಾ ಸಿಟಿ, ಸೇನಾಪತಿ ಬಾಪಟ್ ಮಾರ್ಗ್, ಲೋವರ್ ಪರೇಲ್, ಮುಂಬಯಿ 400013.